# ಮಕ್ಕಳ ನಾಟಕ: ಸ್ವಾಮಿ ವಿವೇಕಾನಂದ

**ರಚನೆ:** ಹೆಚ್.ವಿ. ಸರೋಜ

## ೧ ನೇ ದೃಶ್ಯ

**(ನರೇಂದ್ರ, ಅವನ ಸ್ನೇಹಿತರು ಸೇರಿದ್ದಾರೆ)**

೧: ಏಯ್, ಬನ್ರೋ, ಮರಕೋತಿ ಆಟ ಆಡೋಣ.

೨: ಈ ಜಾಗ ಎಷ್ಟು ಚೆನ್ನಾಗಿದೆ, ಅಲ್ವ?

೩: ಆದರೆ ಇಲ್ಲೊಬ್ಬ ತಾತ ಇದ್ದಾರೆ. ಅವರಿಗೆ ನಮ್ಮನ್ನು ಕಂಡರೆ ಆಗುವುದಿಲ್ಲ. ಯಾವಾಗಲೂ ಬೈಯುತ್ತಿರುತ್ತಾರೆ.

೪: ಬೈದರೆ ಬೈಯಲಿ ಬಿಡು. ನಮ್ಮನ್ನು ಆಡಲು ಬಿಟ್ಟಿದ್ದಾರಲ್ಲ, ಅಷ್ಟೇ ಸಾಕು.

೫: ಏಯ್, ಎಲ್ಲಾ ಬನ್ರೋ, ಕ್ಲಾಪ್ಸ್ ಹಾಕೋಣ. ಯಾರು ಮುಟ್ಟಿಸುವುದು ಅಂತ.

೧: ಓ, ನಾನು ಗೆದ್ದೆ.

೨: ಹಾ! ನಾನು ಗೆದ್ದೆ.

**ತಾತ:** ಅಬ್ಬಬ್ಬಬ್ಬ, ಏನು ಗಲಾಟೆ, ಕೇಳಿ ಕೇಳಿ ತಲೆ ಚಿಟ್ಟು ಹಿಡಿದುಹೋಗಿದೆ. ಏನು ಮಾಡೋದು ಇದಕ್ಕೆ?! (ಓಡಾಡಿಕೊಂಡು ಯೋಚಿಸುವನು)

**ತಾತ:** ಹಾ, ಈಗ ಉಪಾಯ ಹೊಳೀತು. ಏ ಹುಡುಗ್ರಾ, ಬನ್ರೋ ಇಲ್ಲಿ.

೧: ಏಯ್, ತಾತ ಯಾಕೋ ಕರೀತಾ ಇದಾರೆ ಕಣೋ.

೨: ಬೈಯೋಕೆ ಕಣೋ, ಅಲ್ಲಿಗೆ ಹೋಗುವುದು ಬೇಡ.

**ತಾತ:** ಬನ್ರಪ್ಪ ಇಲ್ಲಿ. ಇದೇನು, ಇವರು ಬರುವುದೇ ಇಲ್ಲ! ನಾನು ಬೈತೀನಿ ಅಂತ ಹೆದರಿದ್ದಾರೆ. ಉಪಾಯವಾಗಿ ಕರೆದು ಕೆಲಸ ಸಾಧಿಸಿಕೋಬೇಕು.

**ತಾತ:** ಬನ್ರಪ್ಪ ಮಕ್ಕಳೆ, ಬನ್ರಪ್ಪ, ನೀವೆಲ್ಲ ಜಾಣರು, ಬನ್ನಿ.

೧: ಏನ್ರೋ ಇದು. ಎಂದೂ ಕರೆಯದ ತಾತ ಇವತ್ತು ಕರೀತಿದಾರೆ. ಹೋಗಿ ನೋಡೋಣ, ನಡೆಯಿರಿ.

೨: ಹೋಗಿ ನೋಡೋಣ, ನಡೆಯಿರಿ. ಏನು ತಾತ?

**ತಾತ:** ನೋಡ್ರಪ್ಪ, ನೀವೆಲ್ಲ ದಿನಾ ಇಲ್ಲಿ ಆಟಕ್ಕೆ ಬರ್ತೀರಿ, ಅಲ್ವಾ?

೧: ಹೌದು.

**ತಾತ:** ಈ ಮರದ ಕೆಳಗೆ ಆಡ್ತೀರ, ಅದನ್ನು ಹತ್ತುತ್ತೀರ, ಅಲ್ವಾ?

೨: ಹೌದು.

**ತಾತ:** ಅದನ್ನು ಪ್ರತಿ ನಿತ್ಯ ನೋಡಿ ನಾನು ಎಷ್ಟು ಹೆದರಿಕೊಳ್ಳುತ್ತೀನಿ, ಗೊತ್ತಾ?

೩: ಯಾಕೆ, ತಾತಾ, ಏನಾಯಿತು?

**ತಾತ:** ಅಯ್ಯೋ, ಏನಂತ ಹೇಳ್ಲಪ್ಪ, ನನಗೇ ಭಯವಾಗುತ್ತೆ. ಪಾಪ, ನೀವು ಇನ್ನೂ ಪುಟ್ಟ ಮಕ್ಕಳು, ಹೆದರಿಕೊಂಡುಬಿಟ್ಟರೆ?

**ನರೇಂದ್ರ:** ಇಲ್ಲ ತಾತ, ಹೇಳಿ. ನಾವು ಹೆದರುವುದಿಲ್ಲ.

**ತಾತ:** ಹಾಗಾದರೆ, ಹೇಳಲಾ, ಹೆದರೋದಿಲ್ಲ ತಾನೆ?

**ನರೇಂದ್ರ:** ಇಲ್ಲ, ತಾತ, ಬೇಗ ಹೇಳಿ. ಅದೇನು?

**ತಾತ:** ನೋಡಿ, ಆ ದೊಡ್ಡ ಮರ, ನೀವು ದಿನಾಗಲೂ ಹತ್ತುತ್ತಾ ಇರ್ತೀರಲ್ಲ..

**ಎಲ್ಲರೂ:** ಹೂಂ.

**ತಾತ:** ಅಯ್ಯೋ, ಹೇಗಪ್ಪ ಹೇಳಲಿ?

೧: ಹೇಳಿ ತಾತ, ಪರವಾಗಿಲ್ಲ.

**ತಾತ:** ಅದು, ಅದು, ಅದರ ಮೇಲೆ, ಬೇಡಪ್ಪ, ನೀವು ಹೆದರಿಕೊಂಡರೆ ಕಷ್ಟ.



**ನರೇಂದ್ರ:** ಅಯ್ಯೋ, ತಾತ. ಹೇಳಿ ಅಂದರೆ ಹೇಳಬೇಕು. ನಾವೇನು ಪುಕ್ಕಲು ಅಂದು ಕೊಂಡಿರಾ? ನೋಡಿ, ನನ್ನ ಮಾಂಸಖಂಡ ಹೇಗಿದೆ ನೋಡಿ? ಯಾರು ಬಂದರೂ ನಾನು ಹೆದರಿಸಿ, ಓಡಿಸಿ ಬಿಡುತ್ತೀನಿ.

**ತಾತ:** ಸರಿ, ಆದರೆ?

೨: ಏನು ತಾತ, ಅದು ಇದು ಅಂತ ಸುಮ್ಮನೆ ಆಗ್ಲಿಂದ ಪೀಠಿಕೆ ಹಾಕುತ್ತಾ ಇದ್ದೀರ. ಏನು ಅಂತ ಹೇಳ್ಲೇ ಇಲ್ಲ.

**ತಾತ:** ನೋಡ್ರಪ್ಪ, ನಿಮ್ಮನ್ನೆಲ್ಲ ಕಂಡರೆ ನನಗೆ ತುಂಬ ಇಷ್ಟ.

**ಎಲ್ಲರೂ:** ಯಾಕೆ?

**ತಾತ:** ನೀವೆಲ್ಲರೂ, ನನ್ನ ಮೊಮ್ಮಕ್ಕಳು ಇದ್ದಂಗೆ. ಅದಕ್ಕೇ ನಾನು ಹೇಳುವುದಕ್ಕೆ ಹಿಂಜರಿಯುತ್ತಿದ್ದೇನೆ, ಎಲ್ಲಾದರೂ ನೀವು ಹೆದರಿಕೊಂಡು ಬಿಟ್ಟರೆ ಅಂತ.

೩: ಇಲ್ಲ ಹೇಳಿ, ಪರವಾಗಿಲ್ಲ, ನಾವು ಹೆದರಲ್ಲ.

**ತಾತ:** ಆ ಮರದ ಮೇಲೆ ಒಂದು ದೊಡ್ಡ ದೊಡ್ಡ...

**ನರೇಂದ್ರ:** ಏನಿದೆ ತಾತ, ಬೇಗ ಹೇಳಿ?

**ತಾತ:** ಬ್ರಹ್ಮರಾಕ್ಷಸ ಇದೆಯಪ್ಪ.

**ಎಲ್ಲರೂ:** ಅಯ್ಯಯ್ಯೋ!!

**ನರೇಂದ್ರ:** ಅದಿದ್ದರೇನಾಯಿತು? ಅದೇನು ಮಾಡುತ್ತೆ ನಮ್ಮನ್ನು?

**ತಾತ:** ಅದು ಬಹಳ ಕೆಟ್ಟದಪ್ಪ. ಅದರ ಕಣ್ಣು ಇಷ್ಟಿಷ್ಟಗಲ. ಬಾಯಿ ದೊಡ್ಡದು. ಅದರ ಹಲ್ಲು ಗರಗಸದಂತೆ, ಬಾಯಿಂದ ಉದ್ದಕ್ಕೆ ಚಾಚಿದೆ, ಬಹಳ ಚೂಪಾಗಿರುತ್ತೆ.

**ನರೇಂದ್ರ:** ಇದ್ದರೇನಾಯಿತು? ಅದು ನಮ್ಮನ್ನೇನು ಮಾಡುತ್ತದೆ?

**ತಾತ:** ನಿಮ್ಮನ್ನು ಕಂಡ ತಕ್ಷಣ, ನಿಮ್ಮ ಕುತ್ತಿಗೆಗೆ ಗಬಕ್ಕಂತ ಬಾಯಿ ಹಾಕಿ, ಕೋರೆ ಹಲ್ಲಿಂದ ಚುಚ್ಚಿ, ನಿಮ್ಮ ರಕ್ತ ಹೀರಿ, ಪ್ರಾಣ ತೆಗೆಯುತ್ತೆ, ಮರಿ. ನಿಮ್ಮನ್ನು ನೋಡಿದರೆ ಅದು ಬಿಡುವುದೇ ಇಲ್ಲ.

ಲೇಖಕರು ಬೆಂಗಳೂರು ರಾಮಕೃಷ್ಣ ಆಶ್ರಮದ ಭಕ್ತರು. ಇವರ ಹಲವು ಲೇಖನಗಳು ಈ ಪತ್ರಿಕೆಯಲ್ಲಿ ಪ್ರಕಟವಾಗಿವೆ.

**ಎಲ್ಲರೂ:** ಹಾ! ಹೌದಾ?!

**ತಾತ:** ಅದೋ! ಬ್ರಹ್ಮರಾಕ್ಷಸ ಬರುತ್ತಿರುವಂತಿದೆ. ಬೇಗ ಓಡಿ, ಓಡಿ. (**ಎಲ್ಲರೂ ಓಡಿ ಹೋಗುವರು**).

**ತಾತ:** ಆಹಾಹಾ! ನನ್ನ ಉಪಾಯ ಫಲಿಸಿತು. ಇನ್ನು ಈ ಹುಡುಗರು ಈ ಕಡೆ ಸುಳಿಯುವುದೇ ಇಲ್ಲ. ನಾನು ನಿಶ್ಚಿಂತೆಯಿಂದ ನಿದ್ರಿಸಬಹುದು.

**ಹುಡುಗರು:** ಅಬ್ಬ, ಸದ್ಯ. ಆ ಬ್ರಹ್ಮರಾಕ್ಷಸನಿಂದ ತಪ್ಪಿಸಿಕೊಂಡು ಬಂದ್ವಲ್ಲ.

**೨:** ಅಯ್ಯೋ, ನರೇಂದ್ರ ಎಲ್ಲೋ? ಅವನಿಲ್ಲವೇ ಇಲ್ಲ.

**೩:** ಅವನನ್ನೇನಾದರೂ, ಬ್ರಹ್ಮರಾಕ್ಷಸ ಹಿಡಿದುಕೊಂಡು ಬಿಟ್ಟಿತೋ, ಏನೋ?

**೪:** ಏಯ್, ಏನು ಮಾಡೋದೋ ಈಗ?

**೫:** ಏಯ್ ನರೇಂದ್ರ, ಎಲ್ಲಿ ಹೋದೆಯೋ? (**ಎಲ್ಲರೂ ಅಳುತ್ತಿರುವರು**)

**೧:** ಏ, ಅಲ್ಲಿ ನೋಡು, ನರೇಂದ್ರ ಮರದಿಂದ ಇಳಿದು ಈ ಕಡೆಯೇ ಬರುತ್ತಿದ್ದಾನೆ.

**ಎಲ್ಲರೂ:** ಏ, ನರೇಂದ್ರ, ನೀನು ಅಲ್ಲೇ ಇದ್ದೆಯೇನು? ನಿನಗೇನು ಆಗಲಿಲ್ಲವಾ?

**ನರೇಂದ್ರ:** ಏ, ಮಂಕುಗಳಿರಾ, ನಿಮಗೆ ಬುದ್ಧಿ ಇದೆಯೇನ್ರೋ?

**ಎಲ್ಲರೂ:** ಯಾಕೋ?

**ನರೇಂದ್ರ:** ಅಲ್ಲ, ಆ ತಾತ ಹೇಳಿದರು ಬ್ರಹ್ಮರಾಕ್ಷಸ ಇದೆ ಅಂತ. ನೀವು ನಂಬಿಬಿಟ್ರಿ.

**೧:** ಯಾಕೆ, ಅಲ್ಲಿ ಬ್ರಹ್ಮರಾಕ್ಷಸ ಇಲ್ಲವಾ?

**ನರೇಂದ್ರ:** ಅದು ಅಲ್ಲಿ ಇದ್ದಿದ್ದರೆ ಇಷ್ಟು ದಿವಸದಿಂದ ನಾವು ಅಲ್ಲಿ ಆಡುತ್ತಿದ್ದೇವಲ್ಲ, ಅದು ಸುಮ್ಮನೆ ಇರುತ್ತಿತ್ತೇನ್ರೋ?

**ಎಲ್ಲರೂ:** ಹೌದಲ್ವಾ? ಮತ್ತೆ ಆ ತಾತ ಹೇಳಿದ್ದು?

**ನರೇಂದ್ರ:** ಅಯ್ಯೋ ಪೆದ್ದುಗಳೇ, ಆ ತಾತ ನಮ್ಮನ್ನು ಹೆದರಿಸುವುದಕ್ಕೆ ಹಾಗೆ ಹೇಳಿದ್ದಾರೆ, ಅಷ್ಟೇ.

**ಎಲ್ಲರೂ:** ಯಾಕೆ?

**ನರೇಂದ್ರ:** ನಾವು ಅವರ ಕಾಂಪೌಂಡಿನಲ್ಲಿ ಗಲಾಟೆ ಮಾಡಿ ಅವರಿಗೆ ತೊಂದರೆ ಕೊಡುತ್ತಿದ್ದೀವಲ್ಲ, ಅದನ್ನು ತಪ್ಪಿಸುವುದಕ್ಕೆ.

**೨:** ಹಾಗೇನೋ?

**೩:** ನರೇಂದ್ರ, ನಿನಗ್ಹೇಗೆ ಇದು ತಿಳಿತೋ?

**ನರೇಂದ್ರ:** ನೋಡ್ರೋ, ದೇವರು ನಮಗೆಲ್ಲಾ ಬುದ್ಧಿ ಕೊಟ್ಟಿದ್ದಾನೆ. ಯಾರಾದರೂ ಏನಾದರೂ ಹೇಳಿದರೆ, ಅದನ್ನು ನಾವು ಚೆನ್ನಾಗಿ ಯೋಚಿಸಿ ನಿಜವೆ, ಸುಳ್ಳೆ ಎಂದು ನಿರ್ಧರಿಸಿ, ಆಮೇಲೆ ಮಾತ್ರ ಒಪ್ಪಿಕೊಳ್ಳಬೇಕು. ಗೊತ್ತಾಯಿತೇನ್ರೋ?

**ಎಲ್ಲರೂ:** ಗೊತ್ತಾಯ್ತು ಕಣೋ.

**೩:** ಹಾಗಾದರೆ ಆ ಮರದಲ್ಲೇ ಆಡೋಣ.

**ನರೇಂದ್ರ:** ಬೇಡ, ಪಾಪ. ಆ ತಾತನಿಗೆ ತೊಂದರೆ ಆಗುತ್ತೆ, ಮಾವಿನ ತೋಪಿಗೆ ಹೋಗಿ ಆಡೋಣ, ಬನ್ನಿ.

## ೨ ನೇ ದೃಶ್ಯ

(**ನರೇಂದ್ರ ಕಾಲೇಜಿನಲ್ಲಿ ಓದುವ ತರುಣನಾಗಿದ್ದಾನೆ. ಅವನಿಗೆ ಚಿಕ್ಕಂದಿನಲ್ಲಿದ್ದ ದೇವರನ್ನು ಕಾಣುವ ಹಂಬಲ ಈಗ ತೀವ್ರವಾಗಿದೆ. ಅದಕ್ಕಾಗಿ ಅನೇಕ ಮಹಾತ್ಮರನ್ನು ಭೇಟಿಯಾಗಿ, ದೇವರನ್ನು ಕಂಡಿದ್ದೀರಾ? ಎಂದು ಕೇಳಿದ್ದಾನೆ. ಆದರೆ ಯಾರಿಂದಲೂ ಅವನಿಗೆ ಸಮಾಧಾನಕರವಾದ ಉತ್ತರ ಸಿಗಲಿಲ್ಲ. ಇದರಿಂದ ನಿರಾಶನಾದ ನರೇಂದ್ರ ದೇವರೇ ಇಲ್ಲವೇನೋ ಎಂದುಕೊಳ್ಳುತ್ತಾನೆ. ಆದರೆ ಅವನ ಮನಸ್ಸು ಅದನ್ನೂ ಒಪ್ಪುತ್ತಿಲ್ಲ. ಈ ಹಂಬಲ ಅವನ ಮನಸ್ಸನ್ನು ಕೊರೆಯುತ್ತಿದೆ.**)

**ನರೇಂದ್ರ:** (ಸ್ವಗತ) ಇಂದು ಪ್ರೊಫೆಸರ್ ಹೇಸ್ಟಿಯವರು "ದಿ ಎಕ್ಸ್‌ಕರ್ಷನ್" ಎಂಬ ಕವಿತೆ ಪಾಠ ಮಾಡುವ ಸಂದರ್ಭದಲ್ಲಿ ಹೇಳಿದ ಮಾತುಗಳು ನನ್ನ ಮನಸ್ಸಿಗೆ ಬಹಳ ಹಿಡಿಸಿವೆ. ದಿನದಲ್ಲಿ ಅನೇಕ ಬಾರಿ ದೈವೋನ್ಮಾದದಲ್ಲಿ ಭಾವಸಮಾಧಿಗೆ ಏರಿ, ಆ ಆನಂದವನ್ನು ಅನುಭವಿಸುವುದನ್ನು ಈಗಿನ ಕಾಲದಲ್ಲಿಯೂ ಕಾಣಬೇಕೆಂದಿದ್ದರೆ ದಕ್ಷಿಣೇಶ್ವರದ ರಾಮಕೃಷ್ಣ ಪರಮಹಂಸರನ್ನು ಹೋಗಿ ನೋಡಿ ಎಂದರಲ್ಲ. ಖಂಡಿತ ನಾನು ಅವರನ್ನು ಭೇಟಿ ಆಗಲೇಬೇಕು. ಅವರಿಂದಲಾದರೂ ನನ್ನ ಈ ಸಂಶಯ ನಿವಾರಣೆಯಾಗುವುದೋ ಎಂದು ನೋಡಬೇಕು.

(**ನರೇಂದ್ರ ಶ್ರೀರಾಮಕೃಷ್ಣರನ್ನು ಭೇಟಿಯಾಗಲು ದಕ್ಷಿಣೇಶ್ವರದ ಕಾಳಿ ಮಂದಿರಕ್ಕೆ ಹೊರಟ.**)

## ೩ ನೇ ದೃಶ್ಯ

(**ಶ್ರೀರಾಮಕೃಷ್ಣರ ಬಳಿ ನರೇಂದ್ರ ಬರುತ್ತಾನೆ**)

**ರಾಮಕೃಷ್ಣ:** ಓ, ನರೇಂದ್ರ, ಬಂದೆಯಾ, ಬಾ.

**ನರೇಂದ್ರ:** ಮಹಾಶಯರೇ, ನಿಮ್ಮನ್ನೊಂದು ಪ್ರಶ್ನೆ ಕೇಳುತ್ತೇನೆ.

**ರಾಮಕೃಷ್ಣರು:** ಕೇಳು.

**ನರೇಂದ್ರ:** ನೀವು ದೇವರನ್ನು ಕಂಡಿದ್ದೀರಾ?

**ರಾಮಕೃಷ್ಣರು:** ಕಂಡಿದ್ದೇನೆ. ಅಷ್ಟು ಮಾತ್ರವಲ್ಲ, ನಾನು ನಿನ್ನನ್ನು ಹೇಗೆ ನೋಡುತ್ತಿದ್ದೇನೆಯೋ ಅದಕ್ಕಿಂತ ಹೆಚ್ಚು ಸ್ಪಷ್ಟವಾಗಿ ದೇವರನ್ನು ನೋಡಿದ್ದೇನೆ. ಅವನೊಡನೆ ಮಾತನ್ನೂ ಆಡಿದ್ದೇನೆ.

**ನರೇಂದ್ರ:** ಹಾ! ನಿಜವಾಗಿಯೂ?

**ರಾಮಕೃಷ್ಣರು:** ಖಂಡಿತವಾಗಿಯೂ.

**ನರೇಂದ್ರ:** ಹಾಗಾದರೆ ನನಗೂ ಅವನನ್ನು ತೋರಿಸಬಲ್ಲಿರಾ?

**ರಾಮಕೃಷ್ಣ:** ಓ, ಖಂಡಿತ ತೋರಿಸುತ್ತೇನೆ. ಆದರೆ ಜನಗಳು ಹೆಂಡತಿ, ಮಕ್ಕಳಿಗಾಗಿ ಕೊಡಗಟ್ಟಲೆ ಕಣ್ಣೀರು ಸುರಿಸುತ್ತಾರೆ. ದೇವರು ಬೇಕು ಅನ್ನುವವರು ಯಾರಿದ್ದಾರೆ? ಯಾರಿಗೆ ತಾನೇ ದೇವರು ಬೇಕಾಗಿದೆ?

**ನರೇಂದ್ರ:** ಮಹಾಶಯರೆ, ನನಗೆ ದೇವರು ಮಾತ್ರ ಬೇಕಾಗಿದೆ. ದಯಮಾಡಿ ನನಗೆ ಅವನನ್ನು ತೋರಿಸಿ. ನನಗಿನ್ನೇನೂ ಬೇಡ.

**ರಾಮಕೃಷ್ಣರು:** ಸರಿ, ನಾನು ನಿನಗೆ ಖಂಡಿತವಾಗಿಯೂ ದೇವರನ್ನು ತೋರಿಸುತ್ತೇನೆ. ನೀನಿಲ್ಲಿಗೆ ಬರುತ್ತಿರು. ನಾನು ಹೇಳಿದಂತೆ ಸಾಧನೆ ಮಾಡು.

**ನರೇಂದ್ರ:** ಆಯಿತು, ಮಹಾಶಯರೇ, ಅದೇ ರೀತಿ ಮಾಡುತ್ತೇನೆ. (**ನಮಸ್ಕರಿಸಿ ತೆರಳುವನು**)

*(ಮುಂದುವರಿಯುವುದು)*

